ಸಂಪಾದಕೀಯ

# ಬಾಲ್ಯಕಾಲದ ನಂದನವನ



ಚಿಕ್ಕಂದಿನಲ್ಲಿ ನೀರಾಟ, ಮಣ್ಣಾಟವಾಡಿ ಬೈಸಿಕೊಂಡಿದ್ದು, ಇತರ ಮಕ್ಕಳೊಂದಿಗೆ ಆಟವಾಡುತ್ತಾ ಊಟಕ್ಕೆ ಬಾರದೆ ತಾಯಿ ಹುಡುಕಿಕೊಂಡು ಬಂದದ್ದು, ಎಲೆಯನ್ನೇ ಫ್ಯಾನ್ ಥರ ಮಾಡಿ, ಕಡ್ಡಿಗೆ ಸಿಲುಕಿಸಿಕೊಂಡು ಅದನ್ನು ಗಿರಿಗಿಟಿ ಮಾಡಿದ್ದು – ಇವೆಲ್ಲ ಯಾರಿಗೆ ನೆನಪಿಲ್ಲ? ಎಲ್ಲ ಜಂಜಾಟಗಳ ನಡುವೆಯೂ ಬಿಡುವಾದಾಗ ಒಮ್ಮೊಮ್ಮೆ ಬಾಲ್ಯದ ನೆನಪಾಗುತ್ತದೆ; ಒಂದು ಕ್ಷಣ ಸುತ್ತಣ ಪ್ರಪಂಚವನ್ನೇ ಮರೆತು ಬಾಲ್ಯದ ದಿನಗಳಲ್ಲಿ ಕಳೆದುಹೋಗಿ ಬಿಡುತ್ತೇವೆ. ಮತ್ತೆ ವಾಸ್ತವಕ್ಕೆ ಮರಳಿದಾಗ ''ಛೇ! ಎಂಥ ಸುಂದರ ಬಾಲ್ಯ ಕಳೆದುಹೋಯಿತಲ್ಲಾ!'' ಎಂದು ನಿಟ್ಟುಸಿರು ಬಿಡುತ್ತೇವೆ. ಬಾಲ್ಯ ಕಳೆದು ತಾರುಣ್ಯ, ಬಳಿಕ ಯೌವನ, ಮುಂದೆ ಇಳಿವಯಸ್ಸು – ಇಷ್ಟಾಗುವಾಗ ಜೀವನದ ಎಷ್ಟೋ ಹಂತಗಳನ್ನು ಹಾದು ಬಂದಿರುತ್ತೇವೆ. ಕಷ್ಟ, ಸುಖಗಳ ಹಾಗೂ ಏರುಪೇರುಗಳ ಈ ಜೀವನದ ಘಟ್ಟಗಳು ಬಾಲ್ಯದಷ್ಟು ಸುಂದರವೆನಿಸುವುದೇ ಇಲ್ಲ. ಈ ಕಾರಣಕ್ಕಾಗಿ ಇರಬೇಕು, ಎಷ್ಟು ವಯಸ್ಸಾದರೂ ಸರಿ, ಬಾಲ್ಯದ ನೆನಪುಗಳು ಕಾಡುತ್ತವೆ.

ಕವಿಗಳು, ಬರಹಗಾರರು, ಕಲಾವಿದರು ತಮ್ಮ ಕೃತಿಗಳಲ್ಲಿ ಬಾಲ್ಯದ ಸುಂದರ ದಿನಗಳನ್ನು ಅದೆಷ್ಟು ಬಗೆಗಳಲ್ಲಿ ಚಿತ್ರಿಸಿದರೂ, ಅದಕ್ಕೆ ಕೊನೆಯೆಂಬುದಿಲ್ಲ. ಕಾರಣ, ಒಂದು ಬಾರಿ ಕಳೆದುಹೋದ ಬಾಲ್ಯ ಮತ್ತೆ ಮರಳಿ ಬರುವುದಿಲ್ಲ. ಕೇವಲ ಸವಿನೆನಪುಗಳಷ್ಟೇ ಅಮೂಲ್ಯ ಸಂಪತ್ತಾಗಿ ಬಿಡುತ್ತವೆ. ಅವನ್ನು ಲೇಖನಿಯ ಮೂಲಕ, ಕುಂಚದ ಮೂಲಕ ಶಾಶ್ವತಗೊಳಿಸುವ ಪ್ರಯತ್ನವನ್ನಷ್ಟೇ ಅವರು ಮಾಡಬಲ್ಲರು.

ಬಾಲ್ಯದ ದಿನಗಳು ಒಬ್ಬೊಬ್ಬ ವ್ಯಕ್ತಿಯದೂ ಒಂದೊಂದು ರೀತಿ; ಒಬ್ಬೊಬ್ಬರದೂ ವಿಶಿಷ್ಟ ಅನುಭವಗಳು. ತಮ್ಮತಮ್ಮ ಹಳ್ಳಿಗಳಲ್ಲಿ , ಪಟ್ಟಣ–ನಗರಗಳಲ್ಲಿ ಅವರವರ ಬಾಲ್ಯ ತನ್ನದೇ ಆದ ರೀತಿಯಲ್ಲಿ ನಡೆದುಹೋಗಿರುತ್ತವೆ. ಅನೇಕರ ಬಾಲ್ಯ ಕಷ್ಟದಾಯಕವೂ, ನರಕಸದೃಶವೂ, ಯಾತನೆಯಿಂದ ಕೂಡಿದ್ದೂ ಆಗಿತ್ತೆಂಬುದು ನಿಜ. ಹೀಗಿದ್ದರೂ, ಬಾಲ್ಯದ ನೆನಪುಗಳು ಎಲ್ಲರನ್ನೂ ಕಾಡುವುದು ಸುಳ್ಳಲ್ಲ. ಈ ಕಾರಣದಿಂದಲೇ ಇರಬೇಕು, ಹಿರಿಯರೆಲ್ಲರೂ ಮಕ್ಕಳ ಬಾಲ್ಯ ಆನಂದಕರವೂ, ನಿರಾತಂಕದಿಂದ ಕೂಡಿದ್ದೂ ಆಗಿರಬೇಕೆಂದು ಬಯಸುತ್ತಾರೆ. ಆದರೆ ಮಕ್ಕಳ ಬಾಲ್ಯ ಆನಂದಕರವಾಗಿ, ಸುಖಮಯವಾಗಿ ಇರಲು ಬೇಕಾದ ಪರಿಸರವೆಂತಹುದು? ಅಂತಹ ಪರಿಸರ ಮಕ್ಕಳಿಗೆ ಲಭಿಸುತ್ತಿದೆಯೆ? ಈಗ ನಮ್ಮ ಸುತ್ತಣ ಸಮಾಜ ಮಕ್ಕಳ ಬಾಲ್ಯಕ್ಕೆ ಯೋಗ್ಯವಾದ ಪರಿಸರವನ್ನು ಒದಗಿಸುತ್ತಿದೆಯೆ? — ಈ ಎಲ್ಲ ಆಲೋಚನೆಗಳು ಪ್ರಸ್ತುತವಾಗುತ್ತವೆ.

### ಘೋರ ವಾಸ್ತವ : ಸಮಾಜದ ಗೊಂದಲಗಳು

ಇತ್ತೀಚೆಗೆ ಸಮಾಜದಲ್ಲಾಗುತ್ತಿರುವ ಬದಲಾವಣೆಗಳು ಹಲವು ರೀತಿಯ ಕಠಿಣ ಪರಿಸ್ಥಿತಿಯನ್ನು ತಂದೊಡ್ಡುತ್ತವೆ. ಹಿಂದೊಮ್ಮೆ, ಆಟೋಟಗಳಲ್ಲಿ, ಓದು–ಬರಹ–ಚಿತ್ರ–ನರ್ತನಗಳಲ್ಲಿ ಮೈಮರೆತು ಸಂಭ್ರಮಿಸುತ್ತಿದ್ದ ಮಕ್ಕಳು 'ಮೂರ್ಖರ ಪೆಟ್ಟಿಗೆ'ಯ (ಟಿ.ವಿ.) ಮುಂದೆ ಮಂತ್ರಮುಗ್ಧರಾಗಿ ಕುಳಿತು, ಅದು ನೀಡುವ ಎಲ್ಲ ಅನಗತ್ಯ ಕೊಳೆ–ಕೊಚ್ಚೆಗಳನ್ನು ಮನಸ್ಸಿನಲ್ಲಿ ತುಂಬಿಕೊಳ್ಳುತ್ತಿವೆ. ಮಕ್ಕಳಿಗೆ ಅರಿವು ಮೂಡುವ ಮುನ್ನವೇ ಚಿತ್ರವಿಚಿತ್ರ ಸದ್ದು ಮಾಡುವ, ಅರ್ಥವಿಲ್ಲದ ನಾನಾ ವಿಡಿಯೋಗಳನ್ನು ತೋರಿಸುವ 'ಮೊಬೈಲ್' ಎಂಬ ಮಿನಿರಾಕ್ಷಸ ಯಂತ್ರವನ್ನು ನೀಡಲಾಗುತ್ತಿದೆ. ಯಾರಾದರೂ, 'ಏಕೆ ಇಷ್ಟು ಚಿಕ್ಕ ಮಗುವಿಗೆ ಇದನ್ನೆಲ್ಲ ಕೊಡುತ್ತೀಯಾ' ಎಂದು ಕೇಳಿದರೆ, 'ಆಡಿಕೊಳ್ಳಲಿ. ಇಲ್ಲದಿದ್ದರೆ ಮಗು ಗದ್ದಲ ಮಾಡುತ್ತದೆ. ಇದನ್ನು ಕೊಟ್ಟರೆ ಸುಮ್ಮನಾಗುತ್ತದೆ' ಎನ್ನುತ್ತಾರೆ. ಎಂಥ ಘೋರ ಅಪರಾಧ! ಇನ್ನೂ ಯಾವ ಸಂಸ್ಕಾರವೂ ಮೂಡದ ಶುದ್ಧ ಮನಸ್ಸಿನಲ್ಲಿ ಇಂಥ ಯಾಂತ್ರಿಕ, ಕೃತಿಮ ಮಾಯಾಜಗತ್ತಿನ ಮಾಯಾಜಾಲ ತಮ್ಮ ಬಲೆಯನ್ನು ಬೀಸಿಬಿಡುತ್ತದೆ! ಮಕ್ಕಳ ಭವಿಷ್ಯ ಹೇಗಾದೀತು ಎಂಬುದನ್ನು ಸುಲಭವಾಗಿ ಊಹಿಸಿಕೊಳ್ಳಬಹುದು!

ವಿವಿಧ ಆಟಿಕೆಗಳು, ಬಣ್ಣಬಣ್ಣದ ಚಿತ್ರಗಳಿರುವ ಮಕ್ಕಳ ಪುಸ್ತಕ, ಹಲವು ರೀತಿಯ ಆಟಗಳು – ಇವೆಲ್ಲ ಮಕ್ಕಳನ್ನು ಆಕರ್ಷಿಸುತ್ತವೆ. ಅಚ್ಚರಿಯಿಂದ ಸುತ್ತಣ ಜಗತ್ತನ್ನು ಕಂಡು ಅರಿತುಕೊಳ್ಳುವ ಪ್ರಕ್ರಿಯೆ ಎಳೆಯ ಮನಸ್ಸುಗಳಲ್ಲಿ ನಿರಂತರ ನಡೆಯುತ್ತಲೇ ಇರುತ್ತವೆ; ಇದರೊಂದಿಗೆ ಮಕ್ಕಳು ಬದುಕನ್ನು ಆನಂದಿಸಬೇಕು, ಜೀವನವನ್ನು ಪ್ರೀತಿಸಬೇಕು. ಅದಕ್ಕಾಗಿ ಅವನ್ನು ಆರೋಗ್ಯಕರವಾದ ಮನರಂಜನೆಗಳಿಂದ ಉಲ್ಲಾಸದಲ್ಲಿಡಬೇಕು – ಅದಕ್ಕಾಗಿಯೇ ಆಟ, ಆಟಿಕೆ, ಪುಸ್ತಕ ಇತ್ಯಾದಿಗಳಿರುವುದು. ಆದರೆ ಇಂತಹ ಬೆಳವಣಿಗೆ, ಆನಂದ, ಸಹಜವಾದ ಜೀವಂತಿಕೆ ಇವನ್ನೇ ಮುರುಟಿಹಾಕುವ ದುಷ್ಟ ಯಂತ್ರಗಳನ್ನು ನೀಡಿ ಮಕ್ಕಳ ಮನ

ಸ್ಸನ್ನು ವಿಕೃತಗೊಳಿಸಬೇಕೆ? ಪ್ರತಿಯೊಬ್ಬ ಹಿರಿಯರು, ಹೆತ್ತವರು ಈ ಪ್ರಶ್ನೆಗೆ ಉತ್ತರಿಸಬೇಕಾಗಿದೆ.

ಇದರೊಂದಿಗೆ ಇಂದಿನ ಸಮಾಜವನ್ನೇ ಗಮನಿಸೋಣ. ಜಗತ್ತಿನ ಎಲ್ಲೆಡೆ ಗಲಭೆ, ಹಿಂಸಾಚಾರ, ಯುದ್ಧಗಳು ಸಾಮಾನ್ಯ ಬದುಕನ್ನು ತಲ್ಲಣಗೊಳಿಸುತ್ತವೆ. ಅನಗತ್ಯ ಕಾರಣಗಳಿಗಾಗಿ ಎಳೆಯ ಮಕ್ಕಳು ಬಲಿಯಾಗುತ್ತಿದ್ದಾರೆ. ಇನ್ನೇನು ಅರಿವು ಮೂಡುತ್ತಿದೆ ಎನ್ನುವಾಗಲೇ ಮಕ್ಕಳು ಹಲವು ಬಗೆಯ ಅನಾಚಾರಗಳನ್ನು ನೋಡಬೇಕಾಗಿದೆ. ಭಾರತದಲ್ಲಂತೂ ಬಡತನ, ಅನಾರೋಗ್ಯಕರ ಪರಿಸರ, ಅಸಮಾನತೆಯ ವೈಪರೀತ್ಯಗಳು ಎಲ್ಲೆಡೆ ತುಂಬಿಕೊಂಡಿವೆ. ಮಕ್ಕಳ ಬಾಲ್ಯ ಇವುಗಳ ನಡುವೆಯೇ ಹಾದುಹೋಗಬೇಕಾಗಿದೆ. ಮನೆಯಲ್ಲಾಗಲಿ, ವಿದ್ಯಾಸಂಸ್ಥೆಗಳಲ್ಲಾಗಲಿ, ಬೇರೆ ಎಲ್ಲೇ ಆಗಲಿ ಒಂದೆರಡು ದುರ್ಘಟನೆ ನಡೆದರೆ, ಪಾಪ – ಅದಕ್ಕೆ ಮುಗ್ಧ ಮಕ್ಕಳು ಬಲಿಯಾಗುತ್ತವೆ. ಮಕ್ಕಳ ಮೇಲಿನ ದೌರ್ಜನ್ಯ ನಿರಂತರ ನಡೆಯುತ್ತದೆ – ಅದನ್ನು ನಿವಾರಿಸಲು ಸಮಾಜದಲ್ಲಿ ಯಾವ ಮಾರ್ಗವೂ ಇಲ್ಲವೆ? ಎಳೆಯ ಮನಸ್ಸಿನ ಮೇಲೆ, ಬಾಲ್ಯಕಾಲದಲ್ಲಿ ನಡೆದ ಒಂದೇ ಒಂದು ದುರ್ಘಟನೆ ಎಂತಹ ಮಾನಸಿಕ ಆಘಾತವನ್ನು ಉಂಟುಮಾಡುತ್ತದೆ! ಜೀವನಪರ್ಯಂತ ಅಂತಹ ಮಕ್ಕಳು ಮಾನಸಿಕ ಹಿಂಸೆ, ಅನಾರೋಗ್ಯದಿಂದ ಬಳಲಿರುವ ಉದಾಹರಣೆಗಳು ಸಾಕಷ್ಟಿವೆ. ಇಂತಹ ಘಟನೆಗಳು ನೂರರಲ್ಲಿ ಒಂದು, ಸಾವಿರದಲ್ಲಿ ಒಂದು ಎಂದೆಲ್ಲ ಕೆಲವರು ವಾದಿಸಬಹುದು. ಆದರೆ, ಯಾವ ಮಗುವಿಗೇ ಆಗಲಿ, ಅಂತಹ ಘೋರ ಅನುಭವ ಉಂಟಾಗಬಾರದು, ಆರೋಗ್ಯಕರ ಹಾಗೂ ಆನಂದಕರ ಬಾಲ್ಯ ಲಭಿಸಬೇಕೆಂಬುದೇ ಎಲ್ಲರ ಹಂಬಲ. ಆದರೆ ಅದಕ್ಕೆ ತಕ್ಕುದಾದ ಪರಿಸರವನ್ನು ಸಮಾಜವು ನಿರ್ಮಿಸಬೇಡವೆ?

## ಶ್ರೇಷ್ಠ ವ್ಯಕ್ತಿಗಳ ನಿರ್ಮಾಣ-ಬಾಲ್ಯಕಾಲದ ಮಹತ್ವ

ಜಗತ್ತಿನ ಮಹಾಪುರುಷರ ಜೀವನದಲ್ಲಿ ಅವರ ಬಾಲ್ಯಕಾಲ ಬಹಳ ಮಹತ್ವದ ಪಾತ್ರ ವಹಿಸುತ್ತವೆ. ಹೆಚ್ಚಾಗಿ ತಾಯಿತಂದೆಯರು ಮುಂದೆ ಶ್ರೇಷ್ಠ ವ್ಯಕ್ತಿಗಳಾಗಲಿರುವವರ ಬಾಲ್ಯದಲ್ಲಿ ಅವರ ಬೆಳವಣಿಗೆಗೆ ಅಪಾರ ಕೊಡುಗೆಯನ್ನಿತ್ತಿದ್ದರು ಎಂಬುದನ್ನು ನಾವು ಕೇಳುತ್ತೇವೆ. ಮಕ್ಕಳಿಗಾಗಿ ಹೆತ್ತವರು ತಮ್ಮ ಸುಖ, ನೆಮ್ಮದಿಗಳನ್ನು ತ್ಯಾಗ ಮಾಡಿ, ಅವರ ಬೆಳವಣಿಗೆಯ ಮಹತ್ವವನ್ನು ಅರಿತು ಅವರ ಪಾಲನೆ-ಪೋಷಣೆಯನ್ನು ನಿರ್ವಹಿಸುವುದು ಅನೇಕ ಉದಾಹರಣೆಗಳಲ್ಲಿ ಕಂಡುಬರುತ್ತವೆ. ಇದರೊಂದಿಗೆ, ಮುಂದೆ ಶ್ರೇಷ್ಠ ಜೀವನ ನಡೆಸಲು ಸ್ಫೂರ್ತಿ ನೀಡುವಂತೆ ಅನೇಕ ಮಂದಿ ಆದರ್ಶಪುರುಷರ ಕಥೆ ಹೇಳುವುದು, ಉನ್ನತ ಆದರ್ಶ-ನೈತಿಕತೆಗಳನ್ನು ಮೂಡಿಸಬಲ್ಲ ದೃಷ್ಟಾಂತಗಳನ್ನು ಮಕ್ಕಳ ಮುಂದೆ ಚಿತ್ರಿಸುವುದು ಅನೇಕ ಮಂದಿ ಹೆತ್ತವರು ಮಾಡುವ ಮಹತ್ಕಾರ್ಯವಾಗಿದೆ. ಇದರಿಂದಲೇ ಅನೇಕ ಮಂದಿ ಮಹಾತ್ಮರು ರೂಪುಗೊಳ್ಳುತ್ತಾರೆ. ನಮ್ಮಲ್ಲಿ ಶಿವಾಜಿ, ಸ್ವಾಮಿ ವಿವೇಕಾನಂದ, ಗಾಂಧೀಜಿ, ನೇತಾಜಿ ಮುಂತಾದವರೆಲ್ಲ ತಮ್ಮ ಹೆತ್ತವರಿಂದ ಎಷ್ಟೊಂದು ಸ್ಫೂರ್ತಿದಾಯಕ ಕಥೆಗಳನ್ನು ಕೇಳುತ್ತ ಬೆಳೆದರು ಎಂಬುದು ಸರ್ವವಿದಿತವಾಗಿದೆ. ರಾಮಾಯಣ, ಮಹಾಭಾರತ, ಪಂಚತಂತ್ರ, ಕಥಾಸರಿತ್ಸಾಗರ, ಇನ್ನಿತರ ಪೌರಾಣಿಕ ಕಥೆಗಳು—ಹೀಗೆ ಮನರಂಜನೆಯೊಂದಿಗೆ ಅಪಾರ ನೈತಿಕ-ಮೌಲಿಕ ಆದರ್ಶಗಳನ್ನು ಚಿತ್ರಿಸಬಲ್ಲ ವಿಪುಲವಾದ ಸಾಹಿತ್ಯ ರಚನೆಗಳು ನಮ್ಮಲ್ಲಿವೆ. ಇವನ್ನು ಮಕ್ಕಳಿಗೆ ಒದಗಿಸಿಕೊಡುವ, ವಿವರಿಸಿ ಹೇಳುವ ಕರ್ತವ್ಯ ಹಿರಿಯರದು. ಮಕ್ಕಳ ಬೆಳವಣಿಗೆಯ ಹಂತದಲ್ಲೇ ದೇಶಾಭಿಮಾನ, ಸ್ವಾರ್ಥತ್ಯಾಗ, ದೈವಭಕ್ತಿ, ಪರೋಪಕಾರ, ಸಹಾನುಭೂತಿ – ಮುಂತಾದ ಆದರ್ಶಗಳು ಅವರ ಮನಸ್ಸಿನಲ್ಲಿ ಅಚ್ಚಳಿಯದಂತೆ ನಿಲ್ಲಬೇಕು. ಇದರಿಂದ ಮುಂದಿನ ತಲೆಮಾರಿನ ಜನರು ಈ ಎಲ್ಲ ಶ್ರೇಷ್ಠ ಗುಣಗಳನ್ನು ಮೈಗೂಡಿಸಿಕೊಂಡು, ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ. ನಾಡನ್ನು ಕಟ್ಟುವ ಕಾರ್ಯದಲ್ಲಿ ಮಕ್ಕಳ ಬೆಳವಣಿಗೆ ಎಂತಹ ಮಹತ್ವವನ್ನು ಹೊಂದಿದೆ ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕಾಗಿದೆ.

## ಮಕ್ಕಳಿಗೆ ಉತ್ತಮ ಬಾಲ್ಯವನ್ನು ನೀಡುವುದು ಹೇಗೆ?

ಒಂದು ಸಮಾಜದ ಪರಿಸರವನ್ನು ಬೇಕಾದ ರೀತಿ ನಿರ್ಮಿಸುವಲ್ಲಿ ಹತ್ತು ಹಲವು ಸಂಗತಿಗಳು ಕೆಲಸ ಮಾಡುತ್ತವೆ. ಆದ್ದರಿಂದ ಇದು ಕೇವಲ ಒಬ್ಬರ ಅಥವಾ ಒಂದು ಘಟಕದ ಜವಾಬ್ದಾರಿಯಲ್ಲ; ಎಲ್ಲರೂ ಒಟ್ಟುಗೂಡಿ ನಡೆಸುವ ಕರ್ತವ್ಯ ಎಂಬುದು ಸ್ಪಷ್ಟವಾದ ಸಂಗತಿ. ಶಿಕ್ಷಣ, ವಿದ್ಯಾಲಯ, ತರಗತಿ, ಅಧ್ಯಾಪಕರು, ಪಠ್ಯಪುಸ್ತಕ ನಿರ್ಮಾಣ, ಪರೀಕ್ಷೆ – ಇವೆಲ್ಲವೂ ಶಿಕ್ಷಣ ಇಲಾಖೆಗಳ ನಿಯಂತ್ರಣದಲ್ಲಿ ಇರುವ ಕಾರ್ಯ ನಿಜ. ಆದರೆ ಇವು ಕಾರ್ಯ ನಿರ್ವಹಿಸುವಾಗ ಸರ್ಕಾರ, ಸಮಾಜ, ಮಾಧ್ಯಮಗಳು, ಜನ ಪ್ರತಿನಿಧಿಗಳು – ಎಲ್ಲರ ಪ್ರಭಾವ ಕೆಲಸ ಮಾಡುತ್ತವೆ. ಇದರೊಂದಿಗೆ ಚಿಂತಕರ, ವಿದ್ವಾಂಸರ, ಶೈಕ್ಷಣಿಕ ತಜ್ಞರ ಕೊಡುಗೆಯೂ ಇದೆ. ಇವೆಲ್ಲ ಒಟ್ಟು ಸೇರಿ ಕೆಲಸ ಮಾಡುವ ಸಂದರ್ಭವೇ ಅನೇಕ ಸಲ ಅಸಾಧ್ಯವಾಗುತ್ತದೆ. ಹೀಗಿರುವಾಗ ಒಮ್ಮತದ ಕಾರ್ಯನಿರ್ವಹಣೆ ಹೇಗೆ ಸಾಧ್ಯ?

ಇದು ಕೇವಲ ಶಿಕ್ಷಣದ ವಿಚಾರವಾಯಿತು. ಇನ್ನು ಹೆತ್ತವರು, ಪಾಲಕರು, ಶಿಕ್ಷಕರು ಮಕ್ಕಳ ಬೆಳವಣಿಗೆಯ ಬಗ್ಗೆ ಗಮನ ಕೊಡಬೇಡವೆ? ಅವರಿಗೆ ಸರಿಯಾದ ಮಾರ್ಗವಿದು ಎಂದು ತಿಳಿಸಿ ಕೊಡುವವರು ಯಾರು? 'ಎಲ್ಲರೂ ಹೀಗೆ ಮಾಡುತ್ತಾರೆ. ನಾನೂ ಹೀಗೆ ಮಾಡುತ್ತೇನೆ' ಎಂದು ಎಲ್ಲರೂ ಯಾವುದೋ ಒಂದು ರೀತಿ ಮಾಡಿದರಾಯಿತೆ? ಇನ್ನು ಮಕ್ಕಳಿಗೆ ಅನಗತ್ಯ ವಸ್ತುಗಳ – ಮೊಬೈಲ್, ಕಂಪ್ಯೂಟರ್, ಟಿವಿ ಇತ್ಯಾದಿಗಳ – ದುಷ್ಪರಿಣಾಮ ಉಂಟಾಗದಂತೆ ತಡೆಯುವವರು ಯಾರು? ಮಕ್ಕಳಿಗೆ ಆಧುನಿಕ ಯಂತ್ರಗಳನ್ನು ಎಷ್ಟು ನೀಡಬಹುದು, ಏನನ್ನು ನೀಡಬಾರದು – ಈ ಬಗೆಯ ನೀತಿಯನ್ನು ಯಾರು ತಿಳಿಸಿಕೊಡಬೇಕು?

ಕಡೆಯ ಪಕ್ಷ ಹೆತ್ತವರು ತಮ್ಮ ಮಕ್ಕಳ ಬಗ್ಗೆ ಕೆಲವೊಂದು ಸಂಗತಿಗಳನ್ನು ನಿರ್ಧರಿಸಿ ಅವುಗಳಿಗೆ ಉತ್ತಮ ಬಾಲ್ಯವನ್ನು ನೀಡುವುದು ಹೇಗೆಂದು ಅರಿತುಕೊಳ್ಳಬಹುದು. ಎಲ್ಲ ತಾಯಿ

ತಂದೆಯರೂ ತಮ್ಮ ಮಕ್ಕಳ ಸುಖ, ಉತ್ತಮ ಭವಿಷ್ಯ, ಉತ್ತಮ ಶಿಕ್ಷಣವನ್ನು ಬಯಸುತ್ತಾರೆ. ಆದರೆ ಅದನ್ನು ಯಾವ ರೀತಿ ನೀಡಬೇಕು ಎಂಬ ವಿಷಯದಲ್ಲಿ ಗೊಂದಲವಿದೆ. ಮಕ್ಕಳ ಬೆಳವಣಿಗೆಯಲ್ಲಿ ಅವುಗಳ ಬಾಲ್ಯ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದು ಹೆತ್ತವರಿಗೆ ಗೊತ್ತಿರಬೇಕಾದ ವಿಷಯ. ಅದನ್ನು ಅವರು ಯಾರಿಂದಲಾದರೂ ಕಲಿಯಲಿ, ಎಲ್ಲಿಂದ ಬೇಕಾದರೂ ತರಬೇತಿ ಪಡೆಯಲಿ – ಮಕ್ಕಳ ಬಾಲ್ಯ ಉತ್ತಮವಾಗಿರುವಂತೆ ನೋಡಿಕೊಳ್ಳುವುದು ಅತ್ಯಂತ ಮುಖ್ಯ. ಶ್ರೇಷ್ಠ ವಿಚಾರ, ಉತ್ತಮ ಭಾವನೆ, ಒಳ್ಳೆಯ ಅರಿವು ಹಾಗೂ ಅನುಭವ — ಇವನ್ನು ಮಕ್ಕಳಿಗೆ ಪ್ರೀತಿಯಿಂದ ನೀಡುತ್ತ ಹೋಗಬೇಕು. ಮಕ್ಕಳು ತಮ್ಮ ಕಾಲ ಮೇಲೆ ತಾವೇ ನಿಂತು, ಸ್ವತಂತ್ರವಾಗಿ ಚಿಂತಿಸಿ, ಸ್ವಂತ ನಿರ್ಣಯ ತೆಗೆದುಕೊಳ್ಳುವ ತನಕವೂ ಹೆತ್ತವರ ಜವಾಬ್ದಾರಿಯಿರುತ್ತದೆ. ಪ್ರೀತಿಯೆಂಬ ಅದ್ಭುತ ವಸ್ತು ಈ ಜವಾಬ್ದಾರಿಯನ್ನು ಆನಂದಕರವನ್ನಾಗಿಸುತ್ತದೆ.

### ಆಧುನಿಕ ಭಾರತದಲ್ಲಿ ಮಕ್ಕಳ ಬಾಲ್ಯ

ಭಾರತ ಬದಲಾಗುತ್ತಿದೆ. ಆಧುನಿಕತೆಯೆಂಬುದು ನಗರಗಳನ್ನು ಹೇಗೆ ಬದಲಾಯಿಸಿದೆಯೋ, ಗ್ರಾಮಜೀವನವನ್ನೂ ಬದಲಾಯಿಸುತ್ತಿದೆ. ಹಿಂದೆಂದೂ ಕಂಡಿರದ ಹೊಸ ಸಮಸ್ಯೆಗಳು, ಹೊಸ ಅನುಕೂಲತೆಗಳು ಹಾಗೂ ಸಂಕೀರ್ಣ ಗೊಂದಲಗಳು ನಮ್ಮ ಸಮಾಜವನ್ನು ಆವರಿಸುತ್ತಿವೆ. ಈಗಾಗಲೇ ಮಕ್ಕಳ ಬೆಳವಣಿಗೆಗೆ ಮಾರಕಪ್ರಾಯವಾಗುವ ಕೌಟುಂಬಿಕ ಕಲಹ, ವಿಚ್ಛೇದನ, ಮಾನಸಿಕ ಹಿಂಸಾಚಾರ, ಮಾಧ್ಯಮಗಳ ಅತಿರೇಕ – ಇವೆಲ್ಲ ಸಾಕಷ್ಟು ಹಾನಿಯನ್ನುಂಟು ಮಾಡಿದೆ. ಇವನ್ನು ಸರಿಪಡಿಸಲು ಸಾಧ್ಯವಿಲ್ಲವೆ? ನಮ್ಮ ಸಮಾಜವು 'ಹೊಸ ಚಿಗುರಿನೊಂದಿಗೆ ಹಳೆ ಬೇರಿ'ನ ಸೊಗಡನ್ನು ಅಳವಡಿಸಿಕೊಳ್ಳುವುದು ಸಾಧ್ಯವಿಲ್ಲವೆ?

ಸಮಾಜವು ತನ್ನದೇ ಆದ ರೀತಿಯಲ್ಲಿ ಬದಲಾಗುತ್ತಾ ಹೋಗುತ್ತದೆ. ಅದನ್ನು ತಡೆಹಿಡಿಯಲು ಸಾಧ್ಯವಿಲ್ಲ – ಒಂದು ವೇಳೆ ಪ್ರಯತ್ನಿಸಿದರೂ ವ್ಯರ್ಥ ಎಂಬುದು ಒಂದು ಅಭಿಪ್ರಾಯ. ಸಮಾಜವೆಂಬುದು ವ್ಯಕ್ತಿಗಳಿಂದ ನಿರ್ಮಿತವಾದದ್ದು, ಆದ್ದರಿಂದ ನಮ್ಮ ಅಗತ್ಯಗಳಿಗೆ ತಕ್ಕಂತೆ ಅದನ್ನು ನಾವು ರೂಪಿಸಿಕೊಳ್ಳಬಹುದು; ರೂಪಿಸಿಕೊಳ್ಳಬೇಕು – ಇದು ಇನ್ನೊಂದು ವಾದ. ಇವೆರಡರಲ್ಲಿ ಯಾವುದು ಸರಿ? ಒಂದಕ್ಕೊಂದು ವಿರುದ್ಧವಾದ ಈ ಅಭಿಪ್ರಾಯಗಳಲ್ಲಿ, ಎರಡೂ ಕಡೆ ಸತ್ಯಾಂಶವಿದೆ; ಇದನ್ನು ನಾವು ಸುಲಭವಾಗಿ ಕಂಡುಕೊಳ್ಳಬಹುದು. ಆದರೆ, ವೈಯಕ್ತಿಕ ಪ್ರಯತ್ನವು ಎಷ್ಟು ಪ್ರಭಾವಶಾಲಿ ಎಂಬುದನ್ನು ಅವಲಂಬಿಸಿಯೇ ಎಲ್ಲವೂ ಬದಲಾಗುತ್ತದೆ ಎಂಬುದನ್ನು ನಾವು ಮರೆಯುವಂತಿಲ್ಲ. ಎಲ್ಲ ಗೊಂದಲಗಳ ನಡುವೆ ಕೆಲವರಾದರೂ ಸರಿಯಾದ ರೀತಿಯಲ್ಲಿ ಮಕ್ಕಳ ಬಾಲ್ಯದ ಬಗ್ಗೆ ಕಾಳಜಿ ವಹಿಸಿ, ಅವುಗಳಿಗೆ ಅಗತ್ಯವಾದ, ಆರೋಗ್ಯಕರವಾದ ಬಾಲ್ಯವನ್ನು ಅದ್ಭುತವಾದ ರೀತಿಯಲ್ಲಿ ನೀಡಿದವರಿದ್ದಾರೆ. ಸಮಾಜ ಮಾಡಬೇಕಾದ ಕಾರ್ಯವಿದು: ೧) ಅಂತಹ ಉತ್ತಮ ವ್ಯಕ್ತಿಗಳನ್ನು ಗುರುತಿಸಿ, ಅವರ ರೀತಿ ನೀತಿ-ಅರಿವು-ಆದರ್ಶಗಳನ್ನು ಎತ್ತಿಹಿಡಿಯುವುದು. ೨) ಮಾಧ್ಯಮಗಳು ಈ ಬಗೆಯ ವ್ಯಕ್ತಿಗಳ ಕಥೆಯನ್ನು ಸಮರ್ಥ ರೀತಿಯಲ್ಲಿ ಪ್ರಕಟಿಸುವುದು. ೩) ವಿವಿಧ ವಿದ್ಯಾಸಂಸ್ಥೆ, ಸಂಘ ಸಂಸ್ಥೆಗಳು ಅಂತಹ ವ್ಯಕ್ತಿಗಳ ಮಾದರಿಯನ್ನು ಅನುಸರಿಸು ವುದು. ೪) ಶಿಕ್ಷಕರಿಗೆ ವಿಶೇಷ ತರಬೇತಿ ನೀಡಿ, ಪಾಲಕರೊಂದಿಗೆ ಈ ಬಗೆಯ ಸಂಗತಿಗಳನ್ನು ತಿಳಿಸಿಕೊಡುವುದು. ೫) ಇಡೀ ಸಮಾಜ ಅವರ ಮಾದರಿಯನ್ನು ಅನುಸರಿಸಲು ನೆರವಾಗುವಂತೆ, ಅಂತಹ ವಿಶಿಷ್ಟ ವ್ಯಕ್ತಿಗಳಿಗೆ ವಿಶೇಷ ಪ್ರಶಸ್ತಿ ಇತ್ಯಾದಿಗಳನ್ನು ನೀಡಿ ಗೌರವಿಸುವುದು. ಈ ರೀತಿಯಲ್ಲಿ ಸಮಾಜವು ತನ್ನ ಮಾರ್ಗವನ್ನು ಕಂಡುಕೊಳ್ಳಬಹುದು.

ತುಂಬ ಹಿಂದೆ, ಅಂದರೆ ೧೯೬೦ರಲ್ಲಿ ಪ್ರಸಿದ್ಧ ವಿದ್ವಾಂಸರೂ ಸಾಹಿತಿಗಳೂ ಆದ ಶ್ರೀ ಎ.ಆರ್.ಕೃಷ್ಣಶಾಸ್ತ್ರೀ ಇವರು ಮಕ್ಕಳಿಗಾಗಿ ಬರೆದ '**ನಿರ್ಮಲ ಭಾರತೀ ಅಥವಾ ಮಕ್ಕಳ ಮಹಾಭಾರತ**'ವೆಂಬ ಪುಸ್ತಕದ ಪೀಠಿಕೆಯಲ್ಲಿ ಹೀಗೆ ಹೇಳುತ್ತಾರೆ. ''ನಿರ್ಮಲಾ, ಭಾರತೀ ಇಬ್ಬರೂ ನನ್ನ ಪುಟ್ಟ ಮೊಮ್ಮಕ್ಕಳು. ಅವರೂ ಅವರ ಓರಗೆಯ ಮಕ್ಕಳೂ ಓದಲೆಂದು ಈ ಪುಸ್ತಕವನ್ನು ಬರೆದಿದ್ದೇನೆ... ಚಿಕ್ಕ ಹುಡುಗರಿಗೆ ಅರ್ಥವಾಗುವಂಥ ತಿಳಿಯಾದ ಮಾತಿನಲ್ಲಿ ಇದನ್ನು ಬರೆಯಬೇಕೆಂಬುದು ನನ್ನ ಉದ್ದೇಶ... ಮಕ್ಕಳು ಮೊದಲಿನಿಂದಲೂ ಒಳ್ಳೆಯ ದಾರಿಯಲ್ಲಿ ಹೋಗುವುದನ್ನು ಕಲಿಯಬೇಕು; ತಾಯಿತಂದೆಗಳು ಅದನ್ನು ಬೇಸರಪಡದೆ, ಉದಾಸೀನ ಮಾಡದೆ ಕಲಿಸಬೇಕು. ಚಿಕ್ಕವರಿಗೂ ದೊಡ್ಡವರಿಗೂ ಭಗವಂತನು ಈ ಒಳ್ಳೆಯ ಬುದ್ಧಿಯನ್ನು ಅನುಗ್ರಹಿಸಲಿ!'' ಆ ಕಾಲದಲ್ಲಿ ಮಕ್ಕಳಿಗೆ ಓದಲು, ಕಥೆ ಹೇಳಲು ಸಾಕಷ್ಟು ಸಾಹಿತ್ಯ ಕನ್ನಡದಲ್ಲಿ ಲಭ್ಯವಿರಲಿಲ್ಲ. ಅದಕ್ಕಾಗಿ ಇಂತಹ ಲೇಖಕರು ತಮ್ಮ ಮಕ್ಕಳಿಗಾಗಿಯೇ ಪುಸ್ತಕ ಬರೆಯಬೇಕಾಯಿತು! ಆದರೆ ಇಂದು ಎಷ್ಟೊಂದು ವಿಸ್ತಾರವಾಗಿ ಮಕ್ಕಳ ಸಾಹಿತ್ಯ ಲಭ್ಯವಿದೆ! ಅವುಗಳನ್ನು ಸರಿಯಾದ ರೀತಿಯಲ್ಲಿ ಮಕ್ಕಳಿಗೆ ಒದಗಿಸುವ ಕರ್ತವ್ಯ ಹಿರಿಯರದು. ಕೃಷ್ಣಶಾಸ್ತ್ರಿಗಳಂತಹ ಶ್ರೇಷ್ಠ ಸಾಹಿತಿಗಳು, ವಿದ್ವಾಂಸರು ಇಂದಿಗೂ ಇದ್ದಾರೆ; ಅದೇ ರೀತಿ ಮಕ್ಕಳ ಬಾಲ್ಯದ ಬಗ್ಗೆ ವಿಶೇಷ ಕಾಳಜಿ ಹೊಂದಿದ ವ್ಯಕ್ತಿಗಳೂ ಇದ್ದಾರೆ. ಸಮಾಜ ಅವರ ಹಿರಿಮೆಯನ್ನರಿತು, ಆ ಮಾರ್ಗದಲ್ಲಿ ಮಕ್ಕಳನ್ನು ಕರೆದೊಯ್ಯಬೇಕು – ಅಷ್ಟೆ. ಮನಸಿದ್ದಲ್ಲಿ ಮಾರ್ಗವಿದೆ; ವ್ಯಕ್ತಿಯಿದ್ದಲ್ಲಿ ಸಮಾಜವಿದೆ. ಇದು ಮಕ್ಕಳ ಬಾಲ್ಯವನ್ನು ನಂದನವನವನ್ನಾಗಿಸುವ ಸೂತ್ರವಾಕ್ಯವಾದೀತು. ✯

### ಏಪ್ರಿಲ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೫ | ಶುಕ್ರವಾರ | ಏಕಾದಶಿ |
| ೧೭ | ಬುಧವಾರ | ಶ್ರೀರಾಮನವಮಿ |
| ೧೯ | ಶುಕ್ರವಾರ | ಏಕಾದಶಿ |